**ದಿನಾಂಕಃ 13-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು- ಆರೋಪಿಯ ಪರ ಶ್ರೀ. ವಿ.ಕೆ, ವಕೀಲರಿಂದಃ-**

ಮೃತ ಅಂಭಿಕ ನನ್ನ ಅಕ್ಕನ ಮಗಳು ಮತ್ತು ಪ್ರಾಸಾ-2 ರವರು ಅಂಭಿಕ ರವರ ಯಜಮಾನರಾಗಿರುತ್ತಾರೆ. ಪ್ರಾಸಾ-3 ರವರು ನನ್ನ ಅಣ್ಣನ ಮಗ. ಪ್ರಾಸಾ-2 ರವರು ಮುಖ್ಯಪೇದೆಯಾಗಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿಃ24.06.2018 ರಂದು ನಮ್ಮ ಊರಾದ ಹಾಗಲಹಳ್ಳಿ ಗ್ರಾಮದಲ್ಲಿ ಸಾವು ಆಗಿದ್ದ ಕಾರಣ ನಾನು ಅಲ್ಲಿಗೆ ಹೋಗಿದ್ದೇನು. ಅಲ್ಲಿ ಅಂತ್ಯಕ್ರಿಯೆ ಮುಗಿಯುವಾಗ ಸುಮಾರು 4.00 ಗಂಟೆಯಾಗಿತ್ತು.ದಿಃ24.06.2018 ರಂದು ಮಳೆ ಬಂದಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಮತ್ತು ಪ್ರಾಸಾ-3 ರವರು ಅಂತ್ಯಕ್ರಿಯೆನ್ನು ಮುಗಿಸಿಕೊಂಡು ಪ್ರಾಸಾ-2 ರವರ ಹಿಂದೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೇವು. ನಾನು ಹೋಗುತ್ತಿದ್ದ ದ್ವಿಚಕ್ರ ವಾಹನದ ಹೆಸರು ನನಗೆ ಗೊತ್ತಿಲ್ಲ. ಪ್ರಾಸಾ-2 ಮತ್ತು ಮೃತ ಅಂಭಿಕರವರು ದ್ವಿಚಕ್ರ ವಾಹನ ಸಂ.ಕೆಎ-50-ಹೆಚ್-3332 ರಲ್ಲಿ ಹೋಗುತ್ತಿದ್ದರು. ಪ್ರಾಸಾ-2 ರವರು ಬೈಕಿನಲ್ಲಿ ಹೋಗುತ್ತಿದ್ದ ಮತ್ತು ಸದರಿ ಬೈಕಿನ ಹೆಸರು ನನಗೆ ಗೊತ್ತಿಲ್ಲ. ಪ್ರಾಸಾ-2 ಮತ್ತು ಅವರ ಹೆಂಡತಿಯವರು ಹೆಲ್ಮೇಟ್ ನ್ನು ಹಾಕಿದ್ದರು. ಸಾಕ್ಷಿಯು ಮುಂದುವರಿದು ಪ್ರಾಸಾ-2 ರವರು ಹೆಲ್ಮೇಟ್ ನ್ನು ದರಿಸಿದ್ದರು ಎಂದು ನುಡಿದಿರುತ್ತಾರೆ.

2. ನಾವು ಹಾಗಲಹಳ್ಳಿ ಗ್ರಾಮದಿಂದ ಚಂದ್ರಪ್ಪ ಸರ್ಕಲ್‌ಗೆ ಹೋಗುತ್ತಿದ್ದೇವು. ಸದರಿ ಮಾರ್ಗ ಮಧ್ಯದಲ್ಲಿ ಡ್ಯಾಂ ಇರುವ ಕಾರಣದಿಂದ ರಸ್ತೆಯು ತಿರುವು, ಬಾರೆ ಮತ್ತು ಇಳಿಜಾರಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಿನದಂದು ಮಳೆ ಇದ್ದ ಕಾರಣ ಪ್ರಾಸಾ-2 ಮತ್ತು 3 ರವರು ಅತಿವೇಗವಾಗಿ ಹೋಗುತ್ತಿದ್ದರು ಮತ್ತು ಪ್ರಾಸಾ-2 ರವರ ಗಾಡಿ ಸ್ಕಿಡ್ ಆಗಿ ಅಪಘಾತವು ಸಂಭವಿಸಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ನಿಮಗೆ ಪ್ರಾಸಾ-2 ರವರ ದ್ವಿಚಕ್ರ ವಾಹನವು ಯಾವುದು ಎಂದು ಗೊತ್ತಿಲ್ಲದೆ ಇರುವ ಕಾರಣ ನೀವು ಆ ಸಮಯದಲ್ಲಿ ಅಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನುತ್ತಾರೆ. ಪ್ರಾಸಾ- 2 ರವರು ಪೋಲೀಸ್ ಪೇದೆ ಆಗಿರುವ ಕಾರಣ ಅವರದೇ ತಪ್ಪು ಇದ್ದರೂ ಸಹ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಈ ಸುಳ್ಳು ದೂರನ್ನು ನಿಮ್ಮ ಮುಖಾಂತರ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನುತ್ತಾರೆ.

3. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವ ಕಾರಿನ ಹೆಸರು ಮತ್ತು ಬಣ್ಣ ನನಗೆ ಗೊತ್ತಿಲ್ಲ. ಅಪಘಾತವಾದ ನಂತರ ಮೊದಲು ಚಂದ್ರಪ್ಪ ಸರ್ಕಲ್‌ನಲ್ಲಿ ಇರುವ ಆರೋಗ್ಯ ಕೇಂದ್ರಕ್ಕೆ ಹೋದೇವು, ಅಲ್ಲಿಂದ ರಾಜರಾಜೇಶ್ವರಿ ಆಸ್ಪತ್ರೆಗೆ ಬೇರೆಯವರು ಕರೆದುಕೊಂಡು ಹೋದರು. ಪ್ರಾಸಾ-2 ಮತ್ತು ಅವರ ಹೆಂಡತಿಯನ್ನು ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಬಿ.ಎಸ್.ಸಿ ಪದವಿದಾರನಾಗಿರುತ್ತೇನೆ. ರಾತ್ರಿ 7.30 ರ ಸಮಯದಲ್ಲಿ ಠಾಣೆಗೆ ಹೋಗಿ ಅಲ್ಲಿ ದೂರನ್ನು ಕೈಯಿಂದ ಬರೆದು ನಂತರ ದೂರನ್ನು ದಾಖಲಿಸಿದೇವು. ಪ್ರಾಸಾ-2 ರವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಅವರು ಹೇಳಿದ ರೀತಿಯಲ್ಲಿ ನೀವು ನಿಪಿ-1 ನ್ನು ಬರೆದಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನುತ್ತಾರೆ. ನಾನು ಅಪಘಾತಪಡಿಸಿ ಕಾರಿನ ಚಾಲಕನನ್ನು ನೋಡಿದ್ದೇನೆ.

3. ನಾನು ನಿಪಿ-1 ರಂತೆ ದೂರನ್ನು ನೀಡಿದ ನಂತರ ಪುನಃ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. 25 ನೇ ತಾರಿಖಿನಂದು ಪೋಲಿಸರು ಬೆಳಿಗ್ಗೆ ಪಂಚನಾಮೆಯನ್ನು ಮಾಡಿದರು ಮತ್ತು ಒಂದು ವಾರದ ನಂತರ ನನ್ನನ್ನು ಠಾಣೆಗೆ ಕರೆದಿದ್ದರು. ಪಂಚನಾಮೆಗೆ ಬರುವಂತೆ ಹೇಳಿ ಪೋಲೀಸರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಪೋಲೀಸರು ನನ್ನನ್ನು ಠಾಣೆಗೆ ಬರಲು ಹೇಳಿರುವುದಿಲ್ಲ ಮತ್ತು ಅಪಘಾತ ನಡೆದ ಸ್ಥಳಕ್ಕೆ ಬರುವಂತೆ ಹೆಳಿದ್ದರು.

**ಚಾಸಾ- 1 / ಪ್ರಾಸಾ- 1**

ನಾನು ಬೆಳಿಗ್ಗೆ 9.30 ರಿಂದ 10.00 ಗಂಟೆಯ ಸಮಯದಲ್ಲಿ ಅಪಘಾತ ಸ್ಥಳಕ್ಕೆ ಹೋಗಿರುತ್ತೇನೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹ ಇರಲಿಲ್ಲ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಬರವಣಿಗೆಯನ್ನು ಮಾಡಿಕೊಂಡಿರುತ್ತಾರೆ. ನಾನು ಒಂದು ವಾರದ ನಂತರ ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನಿಂದ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ನನಗೆ ನಿಪಿ-2 ರಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇರುವುದಿಲ್ಲ. ಪೋಲೀಸರು ಅಪಘಾತ ನಡೆದ ಸ್ಥಳಕ್ಕೆ ಬಂದಿರುವುದಿಲ್ಲ, ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ನಿಪಿ-2 ಕ್ಕೆ ನೀವು ಠಾಣೆಯಲ್ಲಿಯೇ ಸಹಿಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನುತ್ತಾರೆ. ಅಪಘಾತ ನಡೆದ ಸ್ಥಳವು ತಿರುವುನಿಂದ ಕೂಡಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನುತ್ತಾರೆ. ಸದರಿ ಅಪಘಾತವು ಪ್ರಾಸಾ-2 ರವರ ಅತಿವೇಗ ಮತ್ತು ಅಜಾಗರೂಕತೆಯಿಂದ ಆಗಿರುತ್ತದೆ ಮತ್ತು ನೀವು ಪ್ರಾಸಾ-2 ರವರಿಗೆ ಪರಿಹಾರ ಬರಬೇಕು ಎಂಬ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನುತ್ತಾರೆ. ನೀವು ಆರೋಪಿಯನ್ನು ನೋಡದೇ ಇದ್ದರೂ ಸಹ ನೋಡಿದ್ದೇನು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ತಾನು ಆರೋಪಿಯನ್ನು ಅಪಘಾತ ನಡೆದ ಸ್ಥಳ ಮತ್ತು ಠಾಣೆಯಲ್ಲಿ ನೋಡಿದ್ದೇನೆ ಎನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**